ಆಗುದುಲ್ಲನಸ್ತದ. ಮುಂದ... ನೀವ ಹಕ್ಕದಾರ್ರು ನೋಡು. ಇನ್ನ ದತ್ತಪ್ಪನ ಪೂಜಾ ನೀನ ಮುಂದುವರಿಸಿಗೊಂಡು ಹೋಗಪಾ" ಎಂದರು. ಉಷಾ ಒಳಗಿನಿಂದ ಬಾಗಿಲಿಗೆ ಬಂದು ನಿಂತವಳು, "ಕಾಕಾ, ನಾವೀಗ ಸಾಯಿಬಾಬಾನ ಭಕ್ತರು. ಮನಿ ಪದ್ಧತಿಗತೆ ಗೌರಿ, ಗಣಪತಿ ಅಂತೂ ಆಗಬೇಕು. ಜೋಡಿಗೆ ಬಾಬಾನ ಭಜನಿ, ಪೂಜಿನೂ ಇರ್ತದ. ನಾವು ನಮ್ಮದೊಂದು ಪದ್ಧತಿ ರೂಢಿ ಮಾಡಕೊಂಡು ಬಿಟ್ಟೇವಿ. ಹೆಚ್ಚಿಂದೇನೂ ಬ್ಯಾಡ ನೋಡ್ರಿ" ಎಂದಳು. ಆಘಾತವಾದಂತಾಯಿತು ಶ್ರೀಪಾದರಿಗೆ. "ಉದಯ... ಮನಿ ಕುಲದೇವರು... ದತ್ತಪ್ಪನ್ನ ಬಿಟ್ಟು..." ಎಂದು ಅವನ ಮುಖ ನೋಡಿದರು. ಸಣ್ಣಗೆ ಕೆಮ್ಮಿದ ಉದಯ, "ಕಾಕಾ, ನಮಗ ಬೇಕಾದಾಗ ದತ್ತಪ್ಪ ನಮಗ ಸಿಗಲಿಲ್ಲ. ಈಗ ನಾವೆಲ್ಲ ಬಾಬಾನ ಭಕ್ತಿವಳಗ ಮುಳುಗೇವಿ. ದತ್ತಪ್ಪನ ಫೋಟೊನೂ ಅದ. ಅಷ್ಟ ಸಾಕು" ಎಂದು ದೃಢವಾಗಿ ನುಡಿದ. ವೇದಾ ತಾಳಲಾರದೇ "ಬಾಬಾನ ಜೋಡಿ ದತ್ತಪ್ಪಂದೂ ಪೂಜಿ ಮಾಡಪಾ..." ಎನ್ನುತ್ತಿದ್ದಂತೆ ಉಷಾ ಖಡಾಖಂಡಿತವಾಗಿ "ಕಾಕು, ಈಗೇನ ಮಾಡ್ತೇವಿ ಅಷ್ಟ ರಗಡ ನೋಡ್ರಿ. ಹೆಚ್ಚಿಂದು ಹಚಗೊಂಡು ವಯಸ್ಸಾದ ಮ್ಯಾಲೆ ಆಗದ ವದ್ಯಾಡೋದ್ಯಾಕ?" ಎಂದಳು. ಪರೋಕ್ಷವಾಗಿ ಅದು ತಮಗೇ ಹೇಳಿದಂತೆನಿಸಿತು ದಂಪತಿಗೆ. ಮರುಮಾತನಾಡದೇ, "ಒಂದೆರೆಡು ದಿವ್ಸ ಇರ್ರಿ. ಅಪರೂಪಕ್ಕ ಬಂದೀರಿ" ಎಂದು ಒತ್ತಾಯಿಸಿದರೂ ನಿಲ್ಲದೇ ಹೊರಟು ಬಂದರು. ಆಶಾಭಂಗವಾದಂತಾಗಿ, "ಪ್ರಥಮಗ್ರಾಸೇ ಮಕ್ಷಿಕಾಪಾತಃ" ಎಂಬಂತಾಗಿತ್ತು.

ಎರಡನೇ ಪ್ರಯತ್ನವಾಗಿ ನಡೆದದ್ದು ವಿಜಯನ ಮನೆಯತ್ತ. ಶ್ರೀಪಾದರ ಸ್ನೇಹಿತನ ಮಗನ ಮದುವೆಗೆಂದು ದಿಬ್ಬಣದ ಜೊತೆಯಲ್ಲೇ ಬೆಳಗಾವಿಗೆ ಬಂದವರು ಅಕ್ಷತೆಯಾದೊಡನೆ ಮೊದಲ ಪಂಕ್ತಿಯಲ್ಲಿ ಊಟ ಮಾಡಿ ವಿಜಯನ ಮನೆಯತ್ತ ದೌಡಾಯಿಸಿದ್ದರು. ಟಿಳಕವಾಡಿಯ ಹರಿಮಂದಿರದ ಹಿಂದೆ ಸ್ವಂತ ಮನೆ ಕಟ್ಟಿಸಿದ್ದ ವಿಜಯ. ದತ್ತಾತ್ರೇಯ ಕೂಡ ಉಮಾರೊಂದಿಗೆ ಅಲ್ಲೇ ಇದ್ದುದು ಅನುಕೂಲವೆನಿಸಿತ್ತು. ಉಭಯ ಕುಶಲೋಪರಿಯೊಂದಿಗೆ ಚಹಾ ಬಂತು. ವಿಭಾ ಬೇಡವೆಂದರೂ ಕೇಳದೇ ಉಪ್ಪಿಟ್ಟಿನ ತಯಾರಿ ನಡೆಸಿ ವಿಜಯನಿಗೆ ಫೋನ್ ಮಾಡಿದಳು. ಮಧ್ಯಾಹ್ನದ ಲಂಚ್ ಅವರ್‌ನಲ್ಲಿ ಬ್ಯಾಂಕಿನಿಂದ ಅವನೂ, "ಏನಂತೀರಿ ಕಾಕಾ? ಹೆಂಗಿದ್ದೀರಿ?" ಎನ್ನುತ್ತಲೇ ಬಂದ. ಮತ್ತದೇ ವಿಷಯ. ದೇವರು... ದತ್ತಪ್ಪ... ಉಪ್ಪಿಟ್ಟಿನ ತಟ್ಟೆಗಳೊಂದಿಗೇ ಹೊರಬಂದ ವಿಭಾ, "ತಪ್ಪು ತಿಳಕೋಬ್ಯಾಡ್ರಿ ಕಾಕಾ. ನಾವೀಗ ಹರಿಮಂದಿರದ ಆಯೀ ಭಕ್ತರು. ಇಲ್ಲಿ ಜಾತಿ, ಮಡಿ ಗದ್ಲನ ಇಲ್ಲ. ಭಜನಿ, ನಾಮಸ್ಮರಣೆನ ಮುಖ್ಯ. ಬ್ಯಾರೇ ಏನೂ ಬ್ಯಾಡ" ಎಂದೇ ಬಿಟ್ಟಳು ಸ್ಪಷ್ಟವಾಗಿ. ಎದುರಿಗೇ ಆಯಿಯವರ ದೊಡ್ಡ ಫೋಟೊ. ಶ್ರೀಪಾದರು ದಿಗ್ಭ್ರಾಂತರಾದರು. "ಅಲ್ಲೋ ವಿಜಯ, ನನಗಂತೂ ಗಂಡಮಕ್ಕಳಿಲ್ಲ. ಹೆಣಮಕ್ಕಳು ದತ್ತಪ್ಪನ್ನ ತೊಗೊಳಿಕ್ಕೆ ತುದಿಗಾಲ ಮ್ಯಾಲೆ ತಯಾರಿದ್ದಾರ. ಖರೆ ಗೋತ್ರ ಬ್ಯಾರೇ ಆಗ್ತದಂತ ನನಗ ಕೊಡ್ಲಿಕ್ಕೆ ಮನಸ್ಸಿಲ್ಲ. ನೀ ಆಯೀ ಜೋಡಿ ದತ್ತಪ್ಪನ್ನೂ ಇಟಗೊಂಡು ಪೂಜಾ ಮಾಡು. ಮುಂದ ಭೊಲೊ ಆಗ್ತದ" ಎಂದರು ನಿಧಾನವಾಗಿ. "ಈಗೆಲ್ಲಾ ಭೊಲೊನ ಆಗೇದ ಕಾಕಾ. ಹುಡುಗರು ಎಂಜಿನಿಯರಿಂಗ್ ಓದ್ಲಿಕತ್ತಾರ. ಈಗಿಂದನ 'ಅಮೆರಿಕಾ' ಅಂತಾರ. ಇವು ವಿದೇಶ ಸೇರಿದ್ರ ಮುಂದ ಮಾಡಾವ್ರ್ಯಾರು? ಅದಕ್ಕ... ಇದ್ದಷ್ಟ ಸಾಕಂತ" ಎಂದು ಗಟ್ಟಿಯಾಗೇ ಹೇಳಿದ. ಇದ್ದುದೂ ನಿಜವಿತ್ತಲ್ಲ. ಪಾಪ, ದತ್ತಾತ್ರೇಯ, ಉಮಾರದ್ದು ಮಾತೇ ಇಲ್ಲ. ಕೊನೆಯದಾಗಿ ಶ್ರೀಪಾದರು, "ನೀ ಏನಂತೀಯಪಾ ದತ್ತಾ?" ಎಂದು ಕೇಳಿದರು. ದತ್ತಾತ್ರೇಯ ಕೈಯಾಡಿಸುತ್ತಾ "ಎಲ್ಲಾ ಅವರದಪಾ. ನಮ್ಮದೇನಿಲ್ಲ. ಅವರ ಜೀವನ, ಅವರ ಇಚ್ಛಾಧಂಗ..." ಎಂದು ಬಿಟ್ಟರು.